KATK010000032021

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು

## ವಿಶೇಷ ಮೊಕದ್ದಮೆ.2/2021

ಪ್ರಾ.ಸಾ. ಃ 4

ದೋ.ಸಾ. ಃ 5

ದಿ.23.10.2025.

| | |
|---|---|
| ಹೆಸರು | ಃ ರವೀಶ್ ಚಂದ್ರ ಎಸ್. |
| ತಂದೆಯ ಹೆಸರು | ಃ ಎಂ.ಶಿವರುದ್ರಯ್ಯ |
| ವಯಸ್ಸು | ಃ 43 ವರ್ಷ |
| ಉದ್ಯೋಗ | ಃ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕ, ತುಮಕೂರು ಉಪ ವಿಭಾಗ-1, ತುಮಕೂರು |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಆಗಸ್ಟ್ 2018 ರಿಂದ ನಾನು ತುಮಕೂರು ಉಪ ವಿಭಾಗ-1 ರಲ್ಲಿ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.19.09.2020 ರಂದು ನನ್ನ ಮೇಲಧಿಕಾರಿಗಳು ನನ್ನನ್ನು ಕರೆದು, ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ಗಾಂಜಾ ಪ್ರಕರಣದಲ್ಲಿ ಪಂಚರಾಗಿ ಸಹಕಾರ ಮಾಡಿ ಎಂದು ನನ್ನನ್ನು ನಿಯೋಜನೆ ಮಾಡಿ ಪತ್ರವನ್ನು ನೀಡಿದರು. ನನ್ನ ಮೇಲಧಿಕಾರಿಗಳಿಗೆ ಕೊಟ್ಟ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ13 ಎಂದು ಗುರುತಿಸಲಾಯಿತು. ನನಗೆ ಕೊಟ್ಟ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ14 ಎಂದು ಗುರುತಿಸಲಾಯಿತು. ನಾನು ಆ ದಿನ ಬೆಳಿಗ್ಗೆ 10.15 ಗಂಟೆಗೆ ಕೋತಿತೋಪಿನಲ್ಲಿದ್ದ ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡೆನು. ನಾನು ಪೋಲೀಸ್ ಠಾಣೆಗೆ ಹೋದಾಗ ಪಿಎಸ್ಐ ಶಮೀನ್,

ಪೋಲೀಸರು ಮತ್ತು ಪಂಚಸಾಕ್ಷಿಗಳು ಇದ್ದರು. ಉರ್ಡಿಗೆರೆಗೆ ಹೋಗಬೇಕಾಗಿದೆ, ಅಲ್ಲಿ ಗಾಂಜಾ ಅಮಾನತ್ತುಪಡಿಸಿಕೊಂಡಾಗ ತೂಕ ಮಾಡಿ ತೂಕ ಹೇಳಬೇಕೆಂದು ಹೇಳಿದರು.

**3.** ನಂತರ ನಾನು, ಪತ್ರಾಂಕಿತ ಅಧಿಕಾರಿ, ಪಂಚರು, ಪಿಎಸ್‌ಐ ಶಮೀನ್ ಮತ್ತು ಪೋಲೀಸರು ಜೀಪಿನಲ್ಲಿ ಉರ್ಡಿಗೆರೆಗೆ ಹೋದೆವು. ಉರ್ಡಿಗೆರೆ ಬಸ್ ಸ್ಟಾಂಡಿನ ಎದುರು ಇರುವ ಅಮ್ಜದ್ ಖಾನ್ ರವರ ಮನೆಗೆ ಹೋದೆವು. ಪತ್ರಾಂಕಿತ ಅಧಿಕಾರಿ ಆ ಮನೆಯಲ್ಲಿದ್ದ ಆರೋಪಿ ಅಮ್ಜದ್ ಖಾನ್ ರವರ ಅಂಗಶೋಧನೆ ಮಾಡಿದರು. ಅಮ್ಜದ್ ಖಾನ್ ರವರ ಬಳಿ ಗಾಂಜಾ ಇರುವಂತಹ ಪ್ಯಾಕೇಟ್ ಸಿಕ್ಕಿತು. ಅದನ್ನು ನನಗೆ ತೂಕ ಮಾಡಲು ಕೊಟ್ಟರು. ಅದನ್ನು ನಾನು ಕೊಂಡು ಹೋಗಿದ್ದ ಮಾಪನ ಯಂತ್ರದ ಮೂಲಕ ತೂಕ ಮಾಡಿದಾಗ ಅದು **400** ಗ್ರಾಂ ತೂಕ ಬಂತು. ಆ ಗಾಂಜಾವನ್ನು ಪೋಲೀಸರು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ ಬಾಯಿ ಕಟ್ಟಿ **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು ಮತ್ತು ಮಹಜರ್ ಮಾಡಿದರು. ಆ ಮಹಜರಿಗೆ ನಾನು ಸಹಿ ಮಾಡಿದ್ದೇನೆ. ಆ ಮಹಜರನ್ನು ನಿಶಾನೆ ಪಿ**2** ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**2(**ಸಿ**)** ಎಂದು ಗುರುತಿಸಲಾಯಿತು. ಆ ದಿನ ಸಿಕ್ಕಿದ ಅಮ್ಜದ್ ಖಾನ್ ಈಗ ನ್ಯಾಯಾಲಯದ ಮುಂದೆ **1** ನೇ ಆರೋಪಿಯಾಗಿದ್ದಾನೆ.

**4.** ಪೋಲೀಸರು ಇನ್ನೊಂದು ಕಡೆ ತೂಕ ಮಾಡಲು ಬರಬೇಕೆಂದು ಕರೆದರು. ಅಲ್ಲಿಂದ ನೇರವಾಗಿ ನಾರಾಯಣಪ್ಪ ನವರ ಮನೆಗೆ ಹೋದೆವು. ಅಲ್ಲಿ ಪೋಲೀಸರು ಒಂದು ಕವರನ್ನು ಕೊಟ್ಟು ತೂಕ ಮಾಡಲು ಹೇಳಿದರು. ಅದು ತೆಂಗಿನ ಮರದ ಬುಡದಲ್ಲಿತ್ತು. ಅದನ್ನು ತೂಕ ಮಾಡಿದಾಗ **2** ಕೆ.ಜಿ. **820** ಗ್ರಾಂ ಬಂತು. ಅದನ್ನು ಪೋಲೀಸರು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ ಬಾಯಿ ಕಟ್ಟಿ **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು ಮತ್ತು ಮಹಜರ್ ಮಾಡಿದರು. ಆ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನಿಶಾನೆ ಪಿ**3(**ಇ**)** ಎಂದು ಗುರುತಿಸಲಾಯಿತು.

**5.** ನಂತರ ಆರೋಪಿ ನಾರಾಯಣಪ್ಪ ನಮ್ಮನ್ನು ಒಂದು ಜಮೀನಿಗೆ ಕರೆದುಕೊಂಡು ಹೋದರು. ಆ ಸ್ಥಳದಲ್ಲಿ ಆರೋಪಿ ಗಾಂಜಾ ಬೆಳೆದಿದ್ದ ಸ್ಥಳ ಎಂದು ತೋರಿಸಿ ಮಣ್ಣನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಪೋಲೀಸರು

ಅಮಾನತ್ತುಪಡಿಸಿಕೊಂಡರು ಮತ್ತು ಸಾದಾ ಮಣ್ಣನ್ನು ಕೂಡಾ ಅಮಾನತ್ತುಪಡಿಸಿಕೊಂಡರು. ಅಲ್ಲಿ ಮಹಜರನ್ನು ಮಾಡಿದ್ದು, ಆ ಮಹಜರಿಗೆ ಸಹಿ ಮಾಡಿದ್ದೇನೆ. ಆ ಸಹಿಯನ್ನು ನಿಶಾನೆ ಪಿ3(ಎಫ್) ಎಂದು ಗುರುತಿಸಲಾಯಿತು. ಆ ದಿನ ಸಿಕ್ಕಿದ ಆರೋಪಿ ನಾರಾಯಣಪ್ಪ ಈಗ ನ್ಯಾಯಾಲಯದ ಮುಂದೆ ಇದ್ದಾನೆ. ಆ ಸಮಯದಲ್ಲಿ ಫೋಟೋ ತೆಗೆದರು. ಆ ಫೋಟೋಗಳನ್ನು ನಿಶಾನೆ ಪಿ4 ರಿಂದ 8 ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಮು ಮಾ 1 ಮತ್ತು 2 ಪ್ಯಾಕೇಟ್ ಗಳಲ್ಲಿ ನನ್ನ ಸಹಿ ಇವೆ. ಅವುಗಳನ್ನು ನೋಡಿ ಗುರುತಿಸಿದ್ದೇನೆ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**6.** ದಿ.25.09.2020 ರಂದು ಅಮಾನತ್ತುಪಡಿಸಿಕೊಂಡ ಗಾಂಜಾವನ್ನು ಇನ್ವೆಂಟರಿ ಮಾಡುವ ಸಲುವಾಗಿ ತುಮಕೂರು ನ್ಯಾಯಾಲಯಕ್ಕೆ ಸಂಜೆ ಹೋಗಲು ನನಗೆ ನನ್ನ ಮೇಲಧಿಕಾರಿಗಳು ಜ್ಞಾಪನ ಪತ್ರವನ್ನು ಕೊಟ್ಟರು. ಆ ಜ್ಞಾಪನ ಪತ್ರವನ್ನು ನೋಡುತ್ತಿದ್ದು ಅದನ್ನುನಿಶಾನೆ ಪಿ15 ಎಂದು ಗುರುತಿಸಲಾಯಿತು. ಆ ಜ್ಞಾಪನ ಪ್ರಕಾರವಾಗಿ ನಾನು ಆ ದಿನ ಸಾಯಂಕಾಲ ತುಮಕೂರಿನ 3ನೇ ಅಧಿಕ ಹಿರಿಯ ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಹೋಗಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹೋದಾಗ 3 ಜನ ಪಂಚರು ಇದ್ದರು, ಪಿಎಸ್ಐ ಶಮೀನ್ ಇದ್ದರು. ಎರಡು ಇನ್ವೆಂಟರಿಗಳನ್ನು ನ್ಯಾಯಾಧೀಶರು ಮಾಡಿದರು. ಮೊದಲ ಚೀಲ ತೂಕ ಮಾಡಿದಾಗ 441 ಗ್ರಾಂ ಇತ್ತು. ಅದರಲ್ಲಿ 100 ಗ್ರಾಂ ಗಾಂಜಾ ಸೊಪ್ಪನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ ಬಾಯಿ ಕಟ್ಟಿ C ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು. ಉಳಿದ 341 ಗ್ರಾಂ ಗಾಂಜಾವನ್ನು ಇನ್ನೊಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ ಬಾಯಿ ಕಟ್ಟಿ C ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ16 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ16(ಎ) ಎಂದು ಗುರುತಿಸಲಾಯಿತು. ಇನ್ನೊಂದು ಪ್ಯಾಕೇಟನ್ನು ತೂಕ ಮಾಡಲು ಹೇಳಿದ್ದು ಅದನ್ನು ತೂಕ ಮಾಡಿದಾಗ 2 ಕೆಜಿ 830 ಗ್ರಾಂ ತೂಕ ಇತ್ತು. 100 ಗ್ರಾಂ ಗಾಂಜಾ ಸೊಪ್ಪನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ ಬಾಯಿ ಕಟ್ಟಿ C ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು. ಉಳಿದ 2 ಕೆಜಿ 730 ಗ್ರಾಂ ಗಾಂಜಾವನ್ನು ಇನ್ನೊಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಅದರ

ಬಾಯಿ ಕಟ್ಟಿ **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿದರು. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**17** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**17(ಎ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು, **9** ಫೋಟೋಗಳನ್ನು ನಿಶಾನೆ ಪಿ**18** ರಿಂದ **26** ಎಂದು ಗುರುತಿಸಲಾಯಿತು. ಆ ದಿನ ತೂಕ ಮಾಡಿದ ಎರಡು ಗಾಂಜಾ ಪ್ಯಾಕೇಟ್ ಗಳ ಸೀಲ್ ಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಒಪ್ಪಿದ್ದರಿಂದ ಅವುಗಳನ್ನು ಮು ಮಾ **3** ಮತ್ತು **4** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿಃ**

**7.** ನನ್ನ ಮೇಲಧಿಕಾರಿಗಳು ದಿ.19.09.2020 ರಂದು ಬೆಳಿಗ್ಗೆ 10.00 ಗಂಟೆಗೆ ನನಗೆ ತಿಳಿಸಿದರು. ಸಿಇಎನ್ ಪೋಲೀಸ್ ಠಾಣೆಗೆ ಹೋದಾಗ ಬೆಳಿಗ್ಗೆ 10.15-10.30 ಗಂಟೆಯಾಗಿತ್ತು. ಸಿಇಎನ್ ಪೋಲೀಸ್ ಠಾಣೆಯಿಂದ ಹೊರಟಾಗ ಬೆಳಿಗ್ಗೆ 10.45 ಗಂಟೆ ಆಗಿತ್ತು. ಉರ್ಡಿಗೆರೆಗೆ ಹೋದಾಗ ಬೆಳಿಗ್ಗೆ 11.30 ಗಂಟೆ ಆಗಿತ್ತು. ಆ ದಿನ ನಾವೆಲ್ಲಾ ಒಂದೇ ಜೀಪಿನಲ್ಲಿ ಹೋದೆವು. ಆ ದಿನ ಪತ್ರಾಂಕಿತ ಅಧಿಕಾರಿ ಅವರ ಅಂಗಶೋಧನೆಯನ್ನು ಮಾಡಿದರು. ಆ ದಿನ ಪೋಲೀಸರು 1 ನೇ ಆರೋಪಿಗೆ ಶೋಧನಾ ಜ್ಞಾಪನವನ್ನು ಜಾರಿ ಮಾಡಿದರೇ ಎಂದು ನನಗೆ ಗೊತ್ತಿಲ್ಲ. ಅಮ್ಜದ್ ಖಾನ್ ರವರ ಮನೆಯ ಅಕ್ಕಪಕ್ಕ, ಸುತ್ತಮುತ್ತ ಯಾರ ಮನೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಅಮ್ಜದ್ ಖಾನ್ ರವರ ಮನೆ ದಕ್ಷಿಣಾಭಿಮುಖವಾಗಿದೆ. ನಾವು ಅಮ್ಜದ್ ಖಾನ್ ಮನೆಗೆ ಹೋದಾಗ ನಮ್ಮನ್ನು ಹೊರತುಪಡಿಸಿ ಬೇರೆ ಯಾರಿದ್ದರು ಎಂದು ನನಗೆ ಗೊತ್ತಿಲ್ಲ. ಮಹಜರ್ ಟೈಪ್ ಮಾಡಿದವರ ಹೆಸರು ಗೊತ್ತಿಲ್ಲ. ಅಮ್ಜದ್ ಖಾನ್ ಕೈಯಲ್ಲಿದ್ದ ಕವರ್ ಯಾವ ಕಲರ್ ನದ್ದು ಎಂದು ನೆನಪಿಲ್ಲ. ಆ ದಿನ ಯಾವ ಕಂಪನಿಯ ತೂಕ ಮಾಪನವನ್ನು ತೆಗೆದುಕೊಂಡು ಹೋಗಿದ್ದೆನೆಂದು ಈಗ ನೆನಪಿಲ್ಲ. ಆ ದಿನ 1 ನೇ ಆರೋಪಿಯ ಮನೆಗೆ ಹೋದಾಗ ಸಿಕ್ಕಿದ ಗಾಂಜಾವನ್ನು ತೂಕ ಮಾಡಿದಾಗ 400 ಗ್ರಾಂ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಅಮ್ಜದ್ ಖಾನ್ ಮನೆಗೆ ಹೋಗಿಲ್ಲ, ಮಹಜರನ್ನು ಠಾಣೆಯಲ್ಲೇ ಕುಳಿತು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಮಹಜರಿಗೆ ಸಹಿ ಮಾಡಿದ ಪಂಚರ ಹೆಸರು ಈಗ ನೆನಪಿಲ್ಲ. ಅಮ್ಜದ್ ಖಾನ್ ರವರ ಮನೆಯ ಚಕ್ಕುಬಂದಿ ಹೇಳಲಾಗುವುದಿಲ್ಲ. ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಇನ್ವೆಂಟರಿ ದಿವಸ ಬಂದಂತಹ ಪಂಚರ ಹೆಸರು ಈಗ ನೆನಪಿಲ್ಲ. ಪೋಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ**

**8.** ಆ ದಿನ ನಾರಾಯಣಪ್ಪನವರ ಮನೆಗೆ ಹೋಗುವಾಗ ನಾರಾಯಣಪ್ಪನವರ ಹೆಸರು ಹೇಳಿಲ್ಲ, ಇನ್ನೊಂದು ಕಡೆಗೆ ಹೋಗಬೇಕೆಂದು ಹೇಳಿದರು. ಅಮ್ಜದ್ ಖಾನ್ ಮನೆಯಿಂದ ನಾರಾಯಣಪ್ಪನ ಮನೆಗೆ 2 ಕಿ ಮೀ ದೂರ. ಆ ದಿನ ನಾರಾಯಣಪ್ಪನ ಮನೆಯಲ್ಲಿ ಎಷ್ಟು ಜನ ಇದ್ದರೆಂದು ನನಗೆ ನೆನಪಿಲ್ಲ. ನಾವು ಹೋಗುವಾಗ ನಾರಾಯಣಪ್ಪ ಆ ಸ್ಥಳದಲ್ಲಿ ಇದ್ದರು. ಪೋಲೀಸರು ಗಾಂಜಾ ತೆಂಗಿನ ಗಿಡದ ಬುಡದಲ್ಲಿದೆ ಎಂದು ನನಗೆ ಹೇಳಿದರು. ನಾವು ಹೋಗುವಾಗ ಅಲ್ಲಿ ಪೋಲೀಸರು ಯಾರೂ ಇರಲಿಲ್ಲ, ನಾವು ಒಟ್ಟಿಗೆ ಹೋಗಿದ್ದೆವು. ಪೋಲೀಸರು ತೂಕ ಮಾಡಲು ಗಾಂಜಾವನ್ನು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ಆ ದಿನ ಗಾಂಜಾ ಚೀಲದಲ್ಲಿತ್ತು. ಗೋಣಿಚೀಲವೇ ಎಂದು ನನಗೆ ನೆನಪಿಲ್ಲ. ಗೋಣಿಚೀಲದ ಬಣ್ಣ ನೆನಪಿಲ್ಲ. ನಾರಾಯಣಪ್ಪನ ಮನೆಯ ಬಾಗಿಲು ಪೂರ್ವಾಭಿಮುಖವಾಗಿದೆ. ನಾರಾಯಣಪ್ಪನ ಮನೆಯ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಬೇರೆ ಮನೆಗಳು ಇವೆ. ನಾರಾಯಣಪ್ಪನ ಮನೆಯಲ್ಲಿ ಫೋಟೋಗಳನ್ನು ಮಧ್ಯಾಹ್ನ 1.30 ಗಂಟೆಗೆ ತೆಗೆದರು. ನಿಶಾನೆ ಪಿ7 ನ್ನು ನಾರಾಯಣಪ್ಪನ ಮನೆಯ ಪಕ್ಕದಲ್ಲಿ ತೆಗೆದರು. ನಿಶಾನೆ ಪಿ7 ರ ಪಕ್ಕದ ಚಕ್ಕುಬಂದಿ ಹೇಳಲಾಗುವುದಿಲ್ಲ. ನಾರಾಯಣಪ್ಪನ ಮನೆ ಶೀಟ್ ನ ಮನೆಯಾಗಿತ್ತು. ನಿಶಾನೆ ಪಿ7 ನಾರಾಯಣಪ್ಪನ ಮನೆಯ ಹತ್ತಿರ ತೆಗೆದ ಫೋಟೋ ಅಲ್ಲ ಎಂದರೆ ಸರಿಯಲ್ಲ. ಗಾಂಜಾವನ್ನು ತೂಕ ಮಾಡಿದಾಗ ಅದು 2 ಕೆಜಿ 820 ಗ್ರಾಂ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಾರಾಯಣಪ್ಪನ ಮನೆಯಲ್ಲಿ ಆ ಗಾಂಜಾವನ್ನು ತೂಕ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಹೋದಾಗ ನಾರಾಯಣಪ್ಪ ಇರಲಿಲ್ಲ ಎಂದರೆ ಸರಿಯಲ್ಲ.

**9.** ಪೋಲೀಸರು ನನ್ನನ್ನು ಯಾವ ಸರ್ವೆ ನಂಬರಿನ ಜಮೀನಿಗೆ ಕರೆದುಕೊಂಡು ಹೋದರು ಎಂದು ನೆನಪಿಲ್ಲ. ಆ ಜಮೀನಿನಲ್ಲಿ ಮುಸುಕಿನ ಜೋಳ ಬೆಳೆದಿದ್ದರು. ಅಲ್ಲಿಗೆ

ನಾರಾಯಣಪ್ಪ, ಪೋಲೀಸರು, ಪಂಚರು ಕರೆದುಕೊಂಡು ಹೋದರು. ಆ ದಿನ ಅಮಾನತ್ತುಪಡಿಸಿಕೊಂಡ ಮಣ್ಣನ್ನು ಆರೋಪಿ ನಾರಾಯಣಪ್ಪ ತೋರಿಸಿಲ್ಲ, ಪೋಲೀಸರು ಬೇರೆ ಕಡೆಯಿಂದ ತಂದಿದ್ದಾರೆ ಎಂದರೆ ಸರಿಯಲ್ಲ. ಆ ಮಣ್ಣು ಸಂಗ್ರಹಿಸಿದ ಜಾಗದ ಚಕ್ಕುಬಂದಿ ಹೇಳಲಾಗುವುದಿಲ್ಲ. ಆ ದಿನ ಮಹಜರಿನಲ್ಲಿ ಬರೆದ ವಿಷಯಗಳು ಅಲ್ಪಸ್ವಲ್ಪ ನೆನಪಿದೆ. ನಾನು ಪೋಲೀಸ್ ಠಾಣೆಯಲ್ಲಿ ಟೈಪ್ ಮಾಡಿದ ಮಹಜರಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಗಾಂಜಾವನ್ನು ಬೇರೆ ಕಡೆಯಿಂದ ತಂದು ಅದರ ಬಗ್ಗೆ ಬರವಣಿಗೆ ಮಾಡಿಸಿ ನನ್ನಿಂದ ತೂಕ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನಾರಾಯಣಪ್ಪನನ್ನು ಇದೇ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ, ಅದೂ ಪೋಲೀಸರು ತೋರಿಸಿದ್ದರಿಂದ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಮಾಡಿದ ಇನ್ವೆಂಟರಿ ಸಮಯದಲ್ಲಿ ತೂಕ ಮಾಡಿದ ಗಾಂಜಾ ನಾರಾಯಣಪ್ಪನ ಮನೆಯಿಂದ ತಂದ ಗಾಂಜಾ ಸೊಪ್ಪು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು